FileNo.DTE-CDC0CDC2/52/2021-JD CDC-DEFT TECH EDUCATION

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560 001, ದಿನಾಂಕ: 15/03/2021.

# ಸುತ್ತೋಲೆ

**ವಿಷಯ:** ಪೂರ್ಣಕಾಲಿಕ ನೆಲೆಯಲ್ಲಿ ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರವನ್ನು ನೀಡುವ ಕುರಿತು.

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರು/ಸಹಾಯಕ/ಸಹ ಪ್ರಾಧ್ಯಾಪಕರು ನಿಯೋಜನೆ ಮೇರೆಗೆ ಉನ್ನತ ಶಿಕ್ಷಣ ಪಡೆಯಲು ನಿರಾಕ್ಷೇಪಣಾ ಪತ್ರವನ್ನು ಪಡೆಯಲು ಅರ್ಜಿ ಸಲ್ಲಿಸುತ್ತಿರುವುದು ಸರಿಯಷ್ಟೆ. ಈ ಸಂಬಂಧ 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಪ್ರವೇಶ ಬಯಸಿ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು ನಿರಾಕ್ಷೇಪಣಾ ಪತ್ರವನ್ನು ಬೋಧಕ ವರ್ಗದವರಿಗೆ ಕೆಸಿಎಸ್ ನಿಯಮ 61(3)ರ ಅಪೆಂಡಕ್ಸ್-IIಎ ನಿಯಮಾನುಸಾರ ನೀಡಲಾಗುವುದು. 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣ ಪ್ರವೇಶ ಬಯಸುವ ಬೋಧಕ ವರ್ಗದವರು ಗೂಗಲ್ ಫಾರ್ಮ್‌ನಲ್ಲಿ ಕೇಳಿದ ವಿಷಯಗಳ ವಿವರವನ್ನು ದಿನಾಂಕ: 20/03/2021ರೊಳಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಗೂಗಲ್ ಫಾರ್ಮ್‌ನಲ್ಲಿ ಬಂದ ಪ್ರತಿಕ್ರಿಯೆಗೆ ಇಲಾಖೆಯ ವಿವಿಧ ವಿಭಾಗದ ಉಪನ್ಯಾಸಕರ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಅದರ ಅನುಸಾರ ಅರ್ಹ ಬೋಧಕ ವರ್ಗದವರಿಗೆ 2021-22ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕೆ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನಿರಾಕ್ಷೇಪಣಾ ಪತ್ರವನ್ನು ನೀಡಲಾಗುವುದು.

ಕೆಸಿಎಸ್ ನಿಯಮ 61(3)ರ ಅಪೆಂಡಕ್ಸ್-II 'ಎ' ಯ ನಿಯಮ I ರ ಉಪನಿಯಮ(1) ರಿಂದ (10)ರನ್ವಯ ಸರ್ಕಾರಿ ನೌಕರರನ್ನು ಪೂರ್ಣಕಾಲಿಕ ನೆಲೆಯಲ್ಲಿ ಎಂಟೆಕ್/ಎಂಇ/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ನಿಯೋಜನೆಯನ್ನು ಸರ್ಕಾರದ ಹಂತದಲ್ಲಿಯೇ ಮಾಡಲಾಗುವುದು. ಈ ಸಂಬಂಧ ಕೆಳಕಂಡ ಅಂಶಗಳನ್ನು ಗಮನಕ್ಕೆ ತರಲಾಗಿದೆ.

1. ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗ ಮಾಡಲು ಉಪನ್ಯಾಸಕರು ಕನಿಷ್ಠ 5 ವರ್ಷಗಳ ನಿರಂತರ/ಸಕ್ರಮ ಸೇವೆಯನ್ನು ಸಲ್ಲಿಸಿರಬೇಕು ಹಾಗೂ ಕ್ರಮವಾಗಿ 48/45 ವರ್ಷ ವಯಸ್ಸಿನೊಳಗಿರಬೇಕು.
2. ಉಪನ್ಯಾಸಕರು ಖಾಯಂ ಪೂರ್ವಾವಧಿಯನ್ನು ತೃಪ್ತಿಕರವಾಗಿ ಪೂರೈಸಿರಬೇಕು.
3. ಉಪನ್ಯಾಸಕರು ಉಪನಿಯಮ(7)ರನ್ವಯ ಉನ್ನತ ವ್ಯಾಸಂಗಕ್ಕೆ ಒಂದು ಬಾರಿ ಮಾತ್ರ ನಿಯೋಜನೆಯ ಸೌಲಭ್ಯವನ್ನು ಪಡೆಯಬಹುದಾಗಿದೆ.
4. ಉಪನಿಯಮ(4)ರನ್ವಯ ಉನ್ನತ ವ್ಯಾಸಂಗಕ್ಕಾಗಿ ನಿಯೋಜಿಸಬೇಕಾದ ಉಪನ್ಯಾಸಕರ ಸಂಖ್ಯೆಯನ್ನು ಸದರಿಯವರ ಕೇಡರಿನ, ಮಂಜೂರಾದ ಖಾಯಂ ಸಿಬ್ಬಂದಿ ಸಂಖ್ಯೆ ಶೇಕಡಾ 5ನ್ನು ಮೀರದಂತೆ ಕನಿಷ್ಠದಲ್ಲಿ ಇಟ್ಟುಕೊಂಡಿರಬೇಕು.
5. ಉಪನ್ಯಾಸಕರನ್ನು ಉಪನಿಯಮ(5)ರನ್ವಯ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ಉನ್ನತ ವ್ಯಾಸಂಗಕ್ಕೆ ನಿಯೋಜನೆ ಮಾಡಲಾಗುತ್ತದೆ.

6. ಪೂರ್ಣಕಾಲಿಕ ನೆಲೆಯಲ್ಲಿ ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರ ಪ್ರಸ್ತಾವನೆಯನ್ನು ಇಲಾಖೆಯ ಅನುಮೋದನೆಗಾಗಿ ಸಲ್ಲಿಸುವಾಗ, ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಶಿಫಾರಸಿನೊಂದಿಗೆ ಈ ಕಛೇರಿ ಸುತ್ತೋಲೆ ಸಂ: ಡಿಟಿಇ/16/ಸಿಡಿಸಿ(2)/2018-19, ದಿನಾಂಕ: 24/07/2018 (ಅನುಬಂಧ ಲಗತ್ತಿಸಿದೆ)ರಲ್ಲಿ ತಿಳಿಸಿರುವಂತೆ, ಎಲ್ಲಾ ದಾಖಲೆಗಳನ್ನು/ಮಾಹಿತಿಗಳನ್ನು ದೃಢೀಕರಿಸಿ ದ್ವಿಪ್ರತಿಗಳೊಂದಿಗೆ ಸಲ್ಲಿಸಬೇಕು.
7. ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗವನ್ನು ಮಾಡಲು ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನೀಡುವ ನಿರಾಕ್ಷೇಪಣಾ ಪತ್ರವೇ ಅಂತಿಮ ಅನುಮತಿ ಪತ್ರ ಎಂದು ಪರಿಗಣಿಸಬಾರದು.
8. ಪೂರ್ಣಕಾಲಿಕ ನೆಲೆಯ ಎಂಟೆಕ್/ಪಿಹೆಚ್‌ಡಿ ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡ ಉಪನ್ಯಾಸಕರು ಇಲಾಖೆಯ/ಸರ್ಕಾರದ ಅನುಮತಿಯನ್ನು ಪಡೆದ ನಂತರವೇ ಪ್ರವೇಶ ಶುಲ್ಕವನ್ನು ಪಾವತಿಸಬೇಕು.

**ಜಂಟಿ ನಿರ್ದೇಶಕರು(ಸಿಡಿಸಿ)**

ಇವರಿಗೆ,

1. ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು/ಪಾಲಿಟೆಕ್ನಿಕ್ ಪ್ರಾಂಶುಪಾಲರಿಗೆ ಮತ್ತು ಉಪನ್ಯಾಸಕರಿಗೆ ಮಾಹಿತಿಗಾಗಿ.
2. ಇ-ಆಡಳಿತ ವಿಭಾಗ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 16 ಸಿಡಿಸಿ (2) 2018-19 / 1880

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ:24-07-2018.

## -:ಸುತ್ತೋಲೆ:-

ವಿಷಯ: ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರ ಉನ್ನತ ವ್ಯಾಸಂಗಕ್ಕಾಗಿ ಸಂಸ್ಥೆಯ ಪ್ರಾಚಾರ್ಯರು ಪ್ರಸ್ತಾವನೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುವಾಗ ಸೂಕ್ತ ಶಿಫಾರಸ್ಸಿನೊಂದಿಗೆ ಮಾಹಿತಿ ಹಾಗೂ ದಾಖಲೆಗಳನ್ನು ದೃಢೀಕರಿಸಿ ಕಳುಹಿಸುವ ಕುರಿತು.

*****

ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಯ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ವಿಟಿಯು/ಇತರೆ ವಿಶ್ವವಿದ್ಯಾಲಯಗಳು/ಇತರೆ ವಿದ್ಯಾಸಂಸ್ಥೆಗಳಲ್ಲಿ ಪೂರ್ಣಕಾಲಿಕ/ಅರೆಕಾಲಿಕ ನೆಲೆಯಲ್ಲಿ/ಕ್ಯೂಐಪಿ ಯೋಜನೆಯಡಿ ಪಿಹೆಚ್.ಡಿ., ಎಂ.ಇ., ಎಂ.ಟೆಕ್., ಎಂ.ಫಿಲ್., ಎಂ.ಎಸ್ಸಿ(ಇಂ.)., ಬಿ.ಇ(Lateral entry) ಉನ್ನತ ವ್ಯಾಸಂಗಕ್ಕೆ ಆಯ್ಕೆಗೊಂಡು, ನಿಯೋಜನೆಗಾಗಿ ಅನುಮತಿ ಕೋರಿ ಸಲ್ಲಿಸಿದ ಮನವಿಗಳನ್ನು ಕೇವಲ ಮುಂದಿನ ಕ್ರಮಕ್ಕಾಗಿ ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಸ್ತಾವನೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸುತ್ತಿರುವುದು ಕಂಡು ಬಂದಿರುತ್ತದೆ. ಆದುದರಿಂದ ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಶಿಫಾರಸ್ಸಿನೊಂದಿಗೆ ಈ ಕೆಳಕಂಡ ದಾಖಲೆಗಳನ್ನು/ಮಾಹಿತಿಗಳನ್ನು ದ್ವಿ-ಪ್ರತಿಗಳಲ್ಲಿ ದೃಢೀಕರಿಸಿ ಕಳುಹಿಸಲು ಈ ಮೂಲಕ ಸೂಚಿಸಲಾಗಿದೆ.

1. ಸದರಿ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಉನ್ನತ ವ್ಯಾಸಂಗಕ್ಕಾಗಿ ಅರ್ಜಿ ಸಲ್ಲಿಸಲು/ಪರೀಕ್ಷೆ ಬರೆಯಲು/ಸಂದರ್ಶನಕ್ಕೆ ಹಾಜರಾಗಲು ನಿರ್ದೇಶನಾಲಯದಿಂದ ಪಡೆದ ನಿರಾಕ್ಷೇಪಣಾ ಪತ್ರದ ಪ್ರತಿ(ಪಡೆದಿಲ್ಲವಾದಲ್ಲಿ ಸೂಕ್ತ ಸ್ಪಷ್ಟೀಕರಣ ನೀಡುವುದು).
2. ಈ ಹಿಂದೆ ಸದರಿ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಉನ್ನತ ವ್ಯಾಸಂಗದ ಯಾವುದೇ ನಿಯೋಜನೆಯನ್ನು ಪಡೆದಿರುವುದಿಲ್ಲ.
3. ಸದರಿ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರ ಜನ್ಮ ದಿನಾಂಕ ಹಾಗೂ ಸೇವೆಗೆ ಸೇರಿದ ದಿನಾಂಕದ ಮಾಹಿತಿ.
4. ಸದರಿ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಐದು ವರ್ಷಗಳ ಸಕ್ರಮ ಸೇವೆಯನ್ನು, ಖಾಯಂ ಪೂರ್ವಾವಧಿ ಪೂರೈಸಿದ್ದು, 45 ವರ್ಷದ ಒಳಗಿನವರಾಗಿರುತ್ತಾರೆ (ಪೂರ್ಣಕಾಲಿಕ ಪಿಹೆಚ್.ಡಿ.,ಗೆ) ಹಾಗೂ 48 ವರ್ಷದ ಒಳಗಿನವರಾಗಿರುತ್ತಾರೆ(ಪೂರ್ಣಕಾಲಿಕ ಎಂ.ಇ., ಎಂ.ಟೆಕ್., ಎಂ.ಫಿಲ್., ಎಂ.ಎಸ್ಸಿ(ಇಂ.)., ಬಿ.ಇ(Lateralentry)ಗೆ).
5. ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರ ಉನ್ನತ ವ್ಯಾಸಂಗದ ನಿಯೋಜನೆಯಿಂದ ವಿಭಾಗದ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಹಾಗೂ ಸಂಸ್ಥೆಯ ದೈನಂದಿನ ಕೆಲಸ ಕಾರ್ಯಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ.
6. ಪಿಹೆಚ್.ಡಿ., ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಎಫ್‌ಡಿ 4 ಎಸ್.ಆರ್.ಎ. 2009, ದಿನಾಂಕ:08-06-2010ರನ್ವಯ ನಿಯಮಾನುಸಾರ ಕ್ರಮಕೈಗೊಳ್ಳುವುದು.

7. ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಕಾರ್ಯ ನಿರ್ವಹಿಸುತಿರುವ ವಿಭಾಗದಲ್ಲಿ/ಕಚೇರಿಯಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯಾವಾರು ವಿವರಗಳೊಂದಿಗೆ, ಸದರಿಯವರ ನಿಯೋಜನೆಯಿಂದ ವಿಭಾಗದ ಕಾರ್ಯಾಭಾರವನ್ನು ಸರಿತೂಗಿಸಬಹುದಾಗಿದೆ(ಪೂರ್ಣಕಾಲಿಕ ಉನ್ನತ ವ್ಯಾಸಂಗಕ್ಕೆ).
8. ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಯಾವ ವಿದ್ಯಾ ಸಂಸ್ಥೆಯಲ್ಲಿ ಹಾಗೂ ಯಾವ ವಿಷಯದಲ್ಲಿ ಪಿಹೆಚ್.ಡಿ., ಎಂ.ಇ., ಎಂ.ಟೆಕ್., ಎಂ.ಫಿಲ್., ಎಂ.ಎಸ್ಸಿ(ಇಂ.)., ಬಿ.ಇ(Lateral entry) ಉನ್ನತ ವ್ಯಾಸಂಗಕ್ಕೆ ಆಯ್ಕೆಯಾಗಿರುತ್ತಾರೆ.
9. ಬೋಧಕ/ಕಾರ್ಯಗಾರ ಸಿಬ್ಬಂದಿ ವರ್ಗದವರು ಆಯ್ಕೆ ಮಾಡಿಕೊಂಡ ಪಿಹೆಚ್.ಡಿ., ಎಂ.ಇ., ಎಂ.ಟೆಕ್., ಎಂ.ಫಿಲ್., ಎಂ.ಎಸ್ಸಿ(ಇಂ.)., ಬಿ.ಇ(Lateral entry) ಉನ್ನತ ವ್ಯಾಸಂಗದ ವಿಷಯವು ಕಾರ್ಯ ನಿರ್ವಹಿಸುತ್ತಿರುವ ವಿಭಾಗಕ್ಕೆ ಸಂಬಂಧಪಟ್ಟಿರುತ್ತದೆ.
10. ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ತಮ್ಮ ಮನವಿಯಲ್ಲಿ ವಿದ್ಯಾಭ್ಯಾಸದ ಸಂಪೂರ್ಣ ವೆಚ್ಚವನ್ನು ಸ್ವಯಂ ಭರಿಸುವ ಷರತ್ತಿಗೆ ಹಾಗೂ ಸಂಬಳ ಹೊರತುಪಡಿಸಿ ಯಾವುದೇ ಆರ್ಥಿಕ ನೆರವು ಇಲಾಖೆಯಿಂದ ಪಡೆಯುವುದಿಲ್ಲವೆಂದು ಒಪ್ಪಿರುತ್ತಾರೆ.
11. ಬೋಧಕ/ಕಾರ್ಯಗಾರ ಸಿಬ್ಬಂದಿ ವರ್ಗದವರ ಉನ್ನತ ವ್ಯಾಸಂಗವು ವಿಭಾಗದ ವಿದ್ಯಾರ್ಥಿಗಳಿಗೆ, ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮದ ಬೋಧನಾ ಕಾರ್ಯಕ್ಕೆ ಹಾಗೂ ತಾಂತ್ರಿಕ ಅವಿಷ್ಕಾರಗಳಿಗೆ ಸಹಕಾರಿಯಾಗುತ್ತದೆ.
12. ಪಿಹೆಚ್.ಡಿ., ಉನ್ನತ ವ್ಯಾಸಂಗಕ್ಕೆ ಸಂಬಂಧಿಸಿದಂತೆ ಸಂಶೋಧನೆ ಮಾಡಲಿಚ್ಛಿಸುವ ಬೋಧಕ/ಕಾರ್ಯಗಾರ ಸಿಬ್ಬಂದಿ ವರ್ಗದವರು ಸಂಶೋಧನಾ ಕೇಂದ್ರದ (Research Center Recognition Act) ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಪಿಹೆಚ್.ಡಿ., ವ್ಯಾಸಂಗದ ಮಾರ್ಗದರ್ಶಕರಿಂದ ಪಡೆದ ನಿರಾಕ್ಷೇಪಣಾ ಪತ್ರ (NOC from Guide).
13. ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರು ಪಿ.ಹೆಚ್‌ಡಿ., ಎಂ.ಇ., ಎಂ.ಟೆಕ್, ಎಂ.ಫಿಲ್, ಎಂ.ಎಸ್ಸಿ(ಇಂ.), ಬಿ.ಇ(Lateral entry) ಅರೆಕಾಲಿಕ ನೆಲೆಯಲ್ಲಿ ಉನ್ನತ ವ್ಯಾಸಂಗಕ್ಕಾಗಿ ಆಯ್ಕೆ ಮಾಡಿಕೊಂಡ ವಿದ್ಯಾಸಂಸ್ಥೆಯು ಕೆಇಎ/ಇತರೆ ವಿಶ್ವವಿದ್ಯಾಲಯ ಇವರು ನಿಗಧಿ ಪಡಿಸಿದ ಪರಧಿಯೊಳಗೆ/ವ್ಯಾಪ್ತಿಯೊಳಗೆ ಬರುವುದರ ಬಗ್ಗೆ ಮಾಹಿತಿ ನೀಡಬೇಕು.
14. ಅನುದಾನಿತ ಸಂಸ್ಥೆಗಳ ಬೋಧಕ/ಕಾರ್ಯಗಾರ ಹಾಗೂ ಕಚೇರಿ ಸಿಬ್ಬಂದಿ ವರ್ಗದವರ ಉನ್ನತ ವ್ಯಾಸಂಗಕ್ಕೆ ಸಂಸ್ಥೆಯ ಆಡಳಿತ ಮಂಡಳಿಯವರು ಒಪ್ಪಿರುವ ಬಗ್ಗೆ ಪ್ರಾಚಾರ್ಯರು ಮಾಹಿತಿ ನೀಡಬೇಕು.
15. ಎ ಐ ಸಿ ಟಿ ಇ ಇವರ ಪರಿಷ್ಕೃತ 6ನೇ ವೇತನ ಶ್ರೇಣಿಯನ್ನು ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿ ವರ್ಗದವರಿಗೆ ನೀಡಿರುವ ಸರ್ಕಾರದ ಆದೇಶ ಸಂ:ಇಡಿ 118 ಡಿಟಿಇ 2010, ದಿ:31-03-2011ರ Appendix IV ರಲ್ಲಿ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಚಾರ್ಯರ ಹುದ್ದೆಗೆ ಇಂಜಿನಿಯರಿಂಗ್ ವಿಷಯದಲ್ಲಿ ಸ್ನಾತಕೋತ್ತರ/ಪಿಹೆಚ್.ಡಿ., ಪದವಿಯ ಅರ್ಹತೆ ಇರಬೇಕೆಂದು ನಮೂದಿಸಿದೆ. ಆದುದರಿಂದ ಸ್ನಾತಕೋತ್ತರ/ಪಿಹೆಚ್.ಡಿ., ಉನ್ನತ ವ್ಯಾಸಂಗಕ್ಕೆ ನಿಯೋಜಿಸುವ ಅಗತ್ಯವಿರುತ್ತದೆ.

ಜಂಟಿ ನಿರ್ದೇಶಕರು (ಸಿಡಿಸಿ)

ಇವರಿಗೆ:
1. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜು ಪ್ರಾಚಾರ್ಯರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ, ತಾಂ.ಶಿ.ನಿ ಬೆಂಗಳೂರು, ಇವರಿಗೆ ಡಿಟಿಇ ವೆಬ್ ಸೈಟ್‌ನಲ್ಲಿ ಪ್ರಚುರ ಪಡಿಸಲು ಮುಂದಿನ ಕ್ರಮಕ್ಕಾಗಿ